# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1528
2. ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ್ ಗೌಡ
3. ಉತ್ತರಿಸುವ ದಿನಾಂಕ : 10-03-2022
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರಿನಲ್ಲಿರುವ ಬಿ.ಬಿ.ಎಂ.ಪಿ. ಹಾಗೂ ಬಿ.ಡಿ.ಎ ಸೇರಿದಂತೆ ಹಲವು ಸರ್ಕಾರಿ ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸ್ವಂತ ಕಟ್ಟಡಗಳಲ್ಲಿ ಕಛೇರಿ ಆರಂಭಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲವು ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿವರಗಳು ಕೆಳಕಂಡಂತಿವೆ:-<br>
<table>
<tr><th>ಕ್ರ ಸಂ.</th><th>ವಲಯಗಳು</th><th>ಬಾಡಿಗೆ ಕಟ್ಟುತ್ತಿರುವ ಕಟ್ಟಡಗಳ ಸಂಖ್ಯೆ</th><th>ವಾರ್ಷಿಕ ಬಾಡಿಗೆ (ಒಟ್ಟು ಮೊತ್ತ)</th></tr>
<tr><td>1</td><td>ಪೂರ್ವ</td><td>3</td><td>2,57,718</td></tr>
<tr><td>2</td><td>ಪಶ್ಚಿಮ</td><td>0</td><td>-</td></tr>
<tr><td>3</td><td>ದಕ್ಷಿಣ</td><td>0</td><td>-</td></tr>
<tr><td>4</td><td>ಯಲಹಂಕ</td><td>0</td><td>-</td></tr>
<tr><td>5</td><td>ಬೊಮ್ಮನಹಳ್ಳಿ</td><td>0</td><td>-</td></tr>
<tr><td>6</td><td>ಮಹದೇವಪುರ</td><td>1</td><td>27,20,856</td></tr>
<tr><td>7</td><td>ರಾಜರಾಜೇಶ್ವರಿನಗರ</td><td>4</td><td>25,97,112</td></tr>
<tr><td>8</td><td>ದಾಸರಹಳ್ಳಿ</td><td>5</td><td>7,13,296</td></tr>
<tr><td></td><td>ಒಟ್ಟು</td><td>13</td><td>62,88,982</td></tr>
</table>
<br>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವಂತ ಕಟ್ಟಡಗಳಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದು, ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವುದಿಲ್ಲ.</td></tr>
<tr><td>ಆ</td><td>ಬೆಂಗಳೂರಿನಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಕಛೇರಿಗಳಿಗೆ ಪ್ರತಿ ತಿಂಗಳು ವೆಚ್ಚವಾಗುತ್ತಿರುವ ಬಾಡಿಗೆ ಹಣ ಎಷ್ಟು;(ಸರ್ಕಾರಿ ಇಲಾಖೆಗಳು, ಬಿಬಿಎಂಪಿ ಹಾಗೂ ಬಿಡಿಎ ಕಛೇರಿಗಳ ಪ್ರತ್ಯೇಕ ಮಾಹಿತಿ ನೀಡುವುದು)</td><td>ಬಿ.ಬಿ.ಎಂ.ಪಿ. ಕಛೇರಿಗಳಿಗೆ ಒಟ್ಟು ವಾರ್ಷಿಕ ಬಾಡಿಗೆ ಮೊತ್ತ ರೂ. 62,88,982/- ಗಳನ್ನು ಪಾವತಿಸಲಾಗುತ್ತಿದೆ.<br><br>ಬಿ.ಡಿ.ಎ. ವತಿಯಿಂದ ವಾರ್ಷಿಕ ಬಾಡಿಗೆ ಮೊತ್ತವನ್ನು ಪಾವತಿಸಿರುವುದಿಲ್ಲ.</td></tr>
<tr><td>ಇ</td><td>ಬೆಂಗಳೂರಿನಲ್ಲಿ ಸರ್ಕಾರಿ ಇಲಾಖೆಗಳು ಬಿ.ಬಿ.ಎಂ.ಪಿ. ಹಾಗೂ ಬಿ.ಡಿ.ಎ ಸ್ವಂತ ಕಛೇರಿ ಹೊಂದಲು ಜಾಗದ ಕೊರತೆ ಇದೆಯೇ? (ಇದ್ದಲ್ಲಿ ಸಂಪೂರ್ಣ ಮಾಹಿತಿ ನೀಡುವುದು)</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಲವು ವಲಯಗಳಲ್ಲಿ ಬಿ.ಬಿ.ಎಂ.ಪಿ.ಗೆ ಸ್ವಂತ ಕಛೇರಿ ಹೊಂದಲು ಜಾಗದ ಕೊರತೆ ಇದ್ದು, ವಿಧಾನ ಸಭಾ ಕ್ಷೇತ್ರದಲ್ಲಿ ಜಾಗಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದ್ದು, ಜಾಗವನ್ನು ಗುರುತಿಸಿಕೊಂಡು ತದನಂತರ ಸಂಬಂಧಪಟ್ಟ ಇಲಾಖೆಯಿಂದ ಬಿ.ಬಿ.ಎಂ.ಪಿ.ಗೆ ಹಸ್ತಾಂತರಿಸಿಕೊಂಡು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳಿಗೆ ಸ್ವಂತ ಕಟ್ಟಡ ಒದಗಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದು.<br><br>ಬೊಮ್ಮನಹಳ್ಳಿ ವಲಯದ ಪಾಲಿಕೆಯ ಯೋಜನಾ ವಿಭಾಗ, ವಾರ್‌ರೂಂ, ಹಾಗೂ ಆರೋಗ್ಯ ವಿಭಾಗಗಳು ಬಿ.ಡಿ.ಎ. ಕಾಂಪ್ಲೆಕ್ಸ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪಾಲಿಕೆ ವತಿಯಿಂದ ಯಾವುದೇ ಬಾಡಿಗೆಯನ್ನು ಪಾವತಿಸುತ್ತಿರುವುದಿಲ್ಲ. ಕೆಲವೊಂದೆಡೆ ಪಾಲಿಕೆಯ ನೂತನ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು ಪೂರ್ಣಗೊಂಡ ನಂತರ ಕಛೇರಿಗಳನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.</td></tr>
</table>

**ಸಂಖ್ಯೆ: ನಅಇ 53 ಬಿಬಿಎಲ್ 2022(ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ